# ಪಾಸಾಗುವ ಪ್ರಯತ್ನ

## (ಪಾಸಾಗಲು ಕನಿಷ್ಠ ಇಷ್ಟಾದರೂ ಓದಿ)

## SSLC PASSING PACKAGE

# ಸಮಾಜ ವಿಜ್ಞಾನ

8 ಅಧ್ಯಾಯಗಳು
40 ಅಂಕಗಳು

7 ಪ್ರಶ್ನೆಪತ್ರಿಕೆಗಳ ವಿಶ್ಲೇಷಣೆಯೊಂದಿಗೆ

**2020-21**

ಸಮಾಜ ವಿಜ್ಞಾನಕ್ಕಾಗಿ
ಸವಿ ಕೊಡುಗೆ



ರಚನೆ
ಬಸವರಾಜ ಚಿಕ್ಕೂರ
ಸರಕಾರಿ ಪ್ರೌಢಶಾಲೆ, ಕೂರಡಗಿ. ಧಾರವಾಡ ಜಿಲ್ಲೆ.

Use E-Papers, Save Trees
Above line hide when print out

# ಮೊದಲ್ನುಡಿ

**ಆತ್ಮೀಯ ಶಿಕ್ಷಕರೇ ಹಾಗೂ ಪ್ರೀತಿಯ ವಿದ್ಯಾರ್ಥಿಗಳೇ........**

**"A GOOD EDUCATION IS FOUNDATION FOR A BETTER FUTURE"** ಎಂಬ ವಿದ್ವಾಂಸರ ಮಾತಿನಂತೆ ಉತ್ತಮ ಭವಿಷ್ಯಕ್ಕಾಗಿ ಉತ್ತಮ ಶಿಕ್ಷಣ ತಳಪಾಯವಾಗಿದೆ. ಸಾಧನೆಯ ಶಿಖರ ಏರಲು ಶಿಕ್ಷಣ ಪಡೆಯುವುದು ಅವಶ್ಯಕವಾಗಿದೆ. ಆದರೆ ಭವಿಷ್ಯದಲ್ಲಿ ಶಿಕ್ಷಣ ನಿರಂತರವಾಗಿರಬೇಕಾದರೇ ಕೆಲವು ಮಜಲುಗಳನ್ನು ಸ್ವಲ್ಪ ಕಷ್ಟ ಪಟ್ಟಾಗಲೇ ದಾಟಲು ಸಾಧ್ಯವಾಗುತ್ತದೆ. ಅಂತಹ ಮಜಲುಗಳಲ್ಲಿ ಎಸ್ ಎಸ್ ಎಲ್ ಸಿ ಯು ಕೂಡಾ ಒಂದು. ಬಹಳಷ್ಟು ವಿದ್ಯಾರ್ಥಿಗಳ ಶಿಕ್ಷಣ 10ನೇ ತರಗತಿ ಅನುತ್ತೀರ್ಣವಾಗುವುದರೊಂದಿಗೆ ಮುಕ್ತಾಯವಾಗುತ್ತದೆ. ಕಾಲೇಜು ಮೆಟ್ಟಿಲು ಹತ್ತುವ ಕನಸು ಕಮರಿ ಹೋಗುತ್ತದೆ. ಈ ನಿಟ್ಟಿನಲ್ಲಿ ಎಸ್ ಎಸ್ ಎಲ್ ಸಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣವಾಗುವುದು ಅವಶ್ಯ ಮತ್ತು ಅನಿವಾರ್ಯವಾಗಿದೆ.

ಇಂದು ಪ್ರೌಢಶಾಲಾ ಶಿಕ್ಷಕರು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವುದರ ಜೊತೆಗೆ ಅವರನ್ನು ಎಸ್ ಎಸ್ ಎಲ್ ಸಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣ ಮಾಡುವ ಬಹುದೊಡ್ಡ ಜವಾಬ್ದಾರಿಯನ್ನು ನಿಭಾಯಿಸಬೇಕಾಗಿದೆ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗಾಗಿ ವಿಶೇಷ ಕ್ರಿಯಾ ಯೋಜನೆ ತಯಾರಿಸಿ ವರ್ಷಪೂರ್ತಿ ಹಲವಾರು ಚಟುವಟಿಕೆಗಳನ್ನು ಮಾಡಿಸಿದರೂ ವಾರ್ಷಿಕ ಪರೀಕ್ಷೆಯ ಫಲಿತಾಂಶ ಬಂದಾಗ ಬಹಳಷ್ಟು ಶಿಕ್ಷಕರ ಯೋಜನೆ, ಯೋಚನೆ ನಿರೀಕ್ಷಿತ ಮಟ್ಟವನ್ನು ತಲುಪಿರುವುದಿಲ್ಲ. ಅಂಥಹ ಶಿಕ್ಷಕರಿಗಾಗಿ ಮತ್ತು ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗಾಗಿ ಏನಾದರೂ ಮಾಡಬೇಕೆಂದು ಆಲೋಚಿಸಿದಾಗ ಹೊಳೆದ ಹೊಸ ಯೋಚನೆಯೇ "ಪಾಸಾಗುವ ಪ್ರಯತ್ನ".

"ಪಾಸಾಗುವ ಪ್ರಯತ್ನ" ಇದು ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗಾಗಿ ತಯಾರಿಸಿದ ವಿಶೇಷ ಕೈಪಿಡಿ, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ಹೊಸ ವಿನ್ಯಾಸದಲ್ಲಿ ಇಲ್ಲಿಯವರೆಗೆ 7 ಪ್ರಶ್ನೆಪತ್ರಿಕೆಗಳನ್ನು ಹೊರಡಿಸಿದ್ದು, ಅವುಗಳನ್ನು ವಿಶ್ಲೇಷಣೆ ಮಾಡಿ ಗರಿಷ್ಠ ಅಂಕಗಳು ನಿಗದಿಯಾಗಿರುವ, ಸರಳವಾಗಿರುವ ಮತ್ತು ಕಡಿಮೆ ಕಂಟೆಂಟ್ ಇದ್ದು ಹೆಚ್ಚಿನ ಅಂಕದ ಪ್ರಶ್ನೆಗಳು ಬಂದಿರುವ ಅಧ್ಯಾಯಗಳಿಗೆ ಪ್ರಾಶಸ್ತ್ಯ ನೀಡಿ ಇದನ್ನು ತಯಾರಿಸಲಾಗಿದೆ. ಜೊತೆಗೆ ಹಲವು ಪ್ರಶ್ನೆಗಳಿಗೆ ಸಾಮಾನ್ಯವಾಗಿ ಒಂದೇ ಉತ್ತರ ಬರುವಂತಹ 8 ಪ್ರಶ್ನೋತ್ತರಗಳನ್ನು ಫ್ರೀ ಹಿಟ್ ಪ್ರಶ್ನೋತ್ತರಗಳು ಎಂದು ಸೇರ್ಪಡೆ ಮಾಡಿದ್ದೇನೆ. ಕೊನೆಯಲ್ಲಿ ಪರೀಕ್ಷೆಯಲ್ಲಿ ಕೇಳಬಹುದಾದ ಬಹುತೇಕ ನಕ್ಷಾ ಸ್ಥಳಗಳನ್ನು 2 ನಕ್ಷೆಗಳ ಮೂಲಕ ಗುರುತಿಸುವ ಪ್ರಯತ್ನ ಮಾಡಿದ್ದೇನೆ.

ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಈ ಪಾಸಿಂಗ್ ಪ್ಯಾಕೇಜ್ ರೂಢಿಸಿದಲ್ಲಿ ಅವರು ಖಂಡಿತವಾಗಿ ಉತ್ತೀರ್ಣರಾಗುತ್ತಾರೆ ಎಂಬ ಭರವಸೆ ನನಗಿದೆ. ಪ್ರತೀ ದಿನ ಒಂದೊಂದೇ ಪ್ರಶ್ನೆಗೆ ಉತ್ತರಿಸಲು ಸಮರ್ಥರಾದರೇ ಸಾಕು ನಾವು ಗೆದ್ದ ಹಾಗೆಯೇ. ಹಾಗೂ ಕೊನೆಯಲ್ಲಿ ನೀಡಿರುವ ಎರಡು ನಕ್ಷೆಗಳನ್ನು ವಿದ್ಯಾರ್ಥಿಗಳು ಅಭ್ಯಾಸ ಮಾಡುವ ಜಾಗದಲ್ಲಿ ಅಂಟಿಸಿ ಪ್ರತಿ ದಿನ ನೋಡುತ್ತಿದ್ದರೇ ನಕ್ಷೆಗಾಗಿ ವಿಶೇಷ ಶ್ರಮವಹಿಸಬೇಕಾದ ಅಗತ್ಯವಿಲ್ಲ. ಈ ಮೊದಲ ಪುಟ್ಟ ಕೈಪಿಡಿಯನ್ನು ರಚಿಸಲು ಸಹಕರಿಸಿದ ನನ್ನ ವಿದ್ಯಾರ್ಥಿ ಬಳಗಕ್ಕೆ ಹಾಗೂ ನನ್ನ ಶಿಕ್ಷಕ ಮಿತ್ರರಿಗೆ ಕೃತಜ್ಞತೆ ಸಲ್ಲಿಸದೇ ಇರಲಾರೆ.

ಈ ಕಿರು ಹೊತ್ತಿಗೆಯಿಂದ ನನ್ನ ಪ್ರೀತಿಯ ಶಿಕ್ಷಕ ಸಮೂಹಕ್ಕೆ ಹಾಗೂ ಶಿಕ್ಷಕರನ್ನು ಶಾಲೆ ಬಿಟ್ಟು ಹೋದ ನಂತರ ಪ್ರೀತಿಸುವ ಹಾಗೂ ಗೌರವಿಸುವ ನನ್ನ ಮುದ್ದು 'ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿ'ಗೆ ಅನುಕೂಲವಾದರೇ ನಾನು ಧನ್ಯ. ಏನಾದರೂ ಸಲಹೆಗಳಿದ್ದರೇ ಮನದುಂಬಿ ಸ್ವಾಗತಿಸುವೆ.

## ನಿಮ್ಮ "ಪಾಸುಗುವ ಪ್ರಯತ್ನ" ಇಂದಿನಿಂದಲೇ ಶುರುವಾಗಲಿ, ಶುಭವಾಗಲಿ

ಇಂತಿ ತಮ್ಮ

ಬಸವರಾಜ ಚಿಕ್ಕೂರ. ಧಾರವಾಡ

BASAVARAJ C. DHARWAD



Use E-Papers, Save Trees
Above line hide when print out

# ಆಯ್ಕೆ ಮಾಡಿಕೊಂಡ ಅಧ್ಯಾಯಗಳು

## ಹಿಂದಿನ ಪ್ರಶ್ನೆಪತ್ರಿಕೆಗಳ ವಿಶ್ಲೇಷಣೆಯೊಂದಿಗೆ ನಿರೀಕ್ಷಿತ ಅಂಕಗಳು

| ಕ್ರ ಸಂ | ಅಧ್ಯಾಯಗಳ ಹೆಸರು | 2020 ಮಾ-1 | 2020 ಮಾ-2 | 2020 ಪೂ.ಸಿ | 2020 ವಾ.ಪ | 2020 ಪೂ.ಪ | 2021 ಮಾ-1 | 2021 ಮಾ-2 | ನಿರೀಕ್ಷಿತ ಅಂಕಗಳು |
|---|---|---|---|---|---|---|---|---|---|
| 1 | ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು | 3 | 3 | 3 | 3 | 3 | 1+3 | 3 | 3 |
| 2 | ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ | 3 | 3 | 3 | 4 | 4 | 3 | 3 | 3 |
| 3 | ಸ್ವಾತಂತ್ರ್ಯ ಹೋರಾಟ | 4 | 4 | 4 | 4 | 4 | 4 | 4 | 4 |
| 4 | ಭಾರತದ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳು | 3 | 4 | 4 | 3 | 4 | 1+3 | 1+2 | 3 |
| 5 | ಅನ್ಯ ರಾಷ್ಟ್ರಗಳೊಂದಿಗೆ ಭಾರತದ ಸಂಬಂಧ | 2 | 2 | 3 | 4 | 3 | 2 | 2+3 | 3 |
| 6 | ಸಾಮಾಜಿಕ ಸ್ತರವಿನ್ಯಾಸ | 2+3 | 2 | 3 | 2+1 | 3 | 3 | 3 | 3 |
| 7 | ಗ್ರಾಮೀಣ ಅಭಿವೃದ್ಧಿ | 3 | 2 | 3 | 3 | 3 | 1+1+2 +3 | 1+1+2 +3 | 5 |
| 8 | ಬ್ಯಾಂಕಿನ ವ್ಯವಹಾರಗಳು | 3 | 2 | 3 | 3 | 2 | 2+3 | 2+3 | 5 |
| 9 | ನಕ್ಷಾಪ್ರಶ್ನೆ | 1+4 | 1+4 | 1+4 | 1+4 | 1+4 | 1+4 | 1+4 | 5 |
| 10 | ಫ್ರೀ ಹಿಟ್ ಪ್ರಶ್ನೋತ್ತರಗಳು | 12 | 12 | 13 | 12 | 9 | 14 | 12 | 6 |
| 11 | ನಿರೀಕ್ಷಿತ ಒಟ್ಟು ಅಂಕಗಳು | | | | | | | | 40 |

BASAVARAJ D.C. DHARWAD

## ಕಲಿಕೆಯ ದೃಢೀಕರಣಕ್ಕಾಗಿ ಚೆಕ್ ಲಿಸ್ಟ್

| ಕ್ರ ಸಂ | ವಿದ್ಯಾರ್ಥಿಗಳ ಹೆಸರು | ಬ್ರಿಟಿಷ್ ಆಳ್ವಿಕೆ ಪರಿಣಾಮ | ಭಾರತದ ಪ್ರಥಮ ಸಂಗ್ರಾಮ | ಸ್ವಾತಂತ್ರ್ಯ ಹೋರಾಟ | ಭಾರತದ ಸಮಸ್ಯೆ ಪರಿಹಾರ | ಅನ್ಯ ರಾ. ಭಾರತದ ಸಂಬಂಧ | ಸಾಮಾಜಿಕ ಸ್ತರ ವಿನ್ಯಾಸ | ಗ್ರಾಮೀಣ ಅಭಿವೃದ್ಧಿ | ಬ್ಯಾಂಕ ವ್ಯವಹಾರ | ಭಾರತದ ನಕ್ಷೆ | ಫ್ರೀ.ಹಿಟ್ ಪ್ರಶ್ನೆ-ಉತ್ತರ |
|---|---|---|---|---|---|---|---|---|---|---|---|
| 1 | ಆರ್ಯನ್ | | | | | | | | ✓ | ✓ | |
| 2 | ಆರಾಧ್ಯಾ | ✓ | | ✓ | | | | | | ✓ | |
| 3 | ಆದರ್ಶ | | | | | | | | | | |
| 4 | ಅದ್ವಿಕಾ | ✓ | | | | | | | | ✓ | |
| 5 | ಆರುಷಿ | ✓ | | | | | | | | ✓ | |
| 6 | ಅಭಿನವ | | | | | | | | | | |
| 7 | ಅನ್ವಿಕಾ | ✓ | | | | | | | | ✓ | |
| 8 | ಆದಿತ್ಯಾ | ✓ | | | | | | | | ✓ | |


Use E-Papers, Save Trees
Above line hide when print out

## ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

**1.ಬ್ರಿಟಿಷ್ ಶಿಕ್ಷಣದಿಂದ ಉಂಟಾದ ಪರಿಣಾಮಗಳು ಯಾವುವು?**

- ಸ್ಥಳೀಯ ಭಾಷೆಗಳಿಗೆ ಪ್ರೋತ್ಸಾಹ
- ವೃತ್ತ ಪತ್ರಿಕೆಗಳ ಬೆಳವಣಿಗೆ
- ಸಾಮಾಜಿಕ ಧಾರ್ಮಿಕ ಸುಧಾರಣಾ ಚಳುವಳಿಗಳ ಹುಟ್ಟು
- ಭಾರತೀಯ ವಿದ್ಯಾವಂತರಲ್ಲಿ ನಾವೀನ್ಯತೆ
- ಜಾಗತಿಕ ಸ್ವಾತಂತ್ರ್ಯ ಚಳುವಳಿಗಳ ಪ್ರಭಾವ
- ಭಾರತೀಯರಿಗೆ ಸಾಂಸ್ಕೃತಿಕ ಪರಂಪರೆಗಳ ಅರಿಕೆ
- ಭಾರತೀಯರಲ್ಲಿ ರಾಷ್ಟ್ರೀಯವಾದದ ಬೆಳವಣಿಗೆ
- ಭಾರತೀಯರಲ್ಲಿ ಆಧುನಿಕತೆ, ಪ್ರಜಾಪ್ರಭುತ್ವ, ವೈಜ್ಞಾನಿಕತೆಯ ಬೆಳವಣಿಗೆ

**2.ಭಾರತದಲ್ಲಿ ಬ್ರಿಟಿಷರ ಶಿಕ್ಷಣ ವ್ಯವಸ್ಥೆಯಲ್ಲಿ ತಂದ ಬದಲಾವಣೆಗಳನ್ನು ವಿವರಿಸಿ.**

- ಆಧುನಿಕ ಶಿಕ್ಷಣ ಪ್ರಸಾರಕ್ಕೆ ಉತ್ತೇಜನ
- ಕಲ್ಕತ್ತದಲ್ಲಿ ಮದರಸಾ ಸ್ಥಾಪನೆ
- ಮೆಕಾಲೆ ವರದಿ ಅನುಸಾರ ಇಂಗ್ಲೀಷ್ ಶಿಕ್ಷಣ ಆರಂಭ
- ಚಾರ್ಲ್ಸ್ ವುಡ್ ಆಯೋಗದ ನೇಮಕ.
- ಬಾಂಬೆ ಕಲ್ಕತ್ತಾ ಮದ್ರಾಸುಗಳಲ್ಲಿ ವಿಶ್ವವಿದ್ಯಾಲಯಗಳ ಸ್ಥಾಪನೆ
- ಬನಾರಸ್ ನಲ್ಲಿ ಸಂಸ್ಕೃತ ಕಾಲೇಜು ಸ್ಥಾಪನೆ
- ಚಾರ್ಲ್ಸ್ ಗ್ರಾಂಟನಿಂದ ಇಂಗ್ಲೀಷ್ ಶಿಕ್ಷಣದ ವಿಸ್ತರಣೆ

**3.ಬ್ರಿಟಿಷರು ರೂಪಿಸಿದ ನ್ಯಾಯಾಂಗ ವ್ಯವಸ್ಥೆಯನ್ನು ವಿಶ್ಲೇಷಿಸಿ**

- ಪ್ರತಿ ಜಿಲ್ಲೆಯಲ್ಲಿ ಎರಡು ಬಗೆಯ ನ್ಯಾಯಾಲಯಗಳ ಸ್ಥಾಪನೆ
- ದಿವಾನಿ ಅದಾಲತ್ ಮತ್ತು ಫೌಜಧಾರಿ ಅದಾಲತ್ ನ್ಯಾಯಾಲಯಗಳು
- ಹಿಂದೂ ಶಾಸ್ತ್ರಗ್ರಂಥಗಳ ಪ್ರಕಾರ ಹಿಂದೂಗಳಿಗೆ ನ್ಯಾಯದಾನ
- ಶರಿಯತ್ ಕಾನೂನು ಪ್ರಕಾರ ಮುಸ್ಲಿಮರಿಗೆ ನ್ಯಾಯದಾನ
- ನಾಗರಿಕ ನ್ಯಾಯಾಲಯಗಳಿಗೆ ಬ್ರಿಟಿಷರ ಅಧ್ಯಕ್ಷತೆ
- ಅಪರಾಧ ನ್ಯಾಯಾಲಯಗಳು ಖಾಜಿಗಳ ಅಧೀನಕ್ಕೆ
- ಹೊಸ ನ್ಯಾಯಾಂಗ ವ್ಯವಸ್ಥೆ ಜಾರಿ

**4.ಬ್ರಿಟಿಷರು ಪೋಲಿಸ್ ವ್ಯವಸ್ಥೆಯಲ್ಲಿ ತಂದ ಸುಧಾರಣೆಗಳು ಯಾವುವು?**

- ಕಾರ್ನವಾಲೀಸನಿಂದ ಪೊಲೀಸ್ ವಿಭಾಗ ಅಸ್ತಿತ್ವಕ್ಕೆ
- 'ಸೂಪರಿಟೆಂಡೆಂಟ್ ಆಫ್ ಪೊಲೀಸ್' ಹೊಸ ಹುದ್ದೆ ಸೃಷ್ಟಿ
- 1861 ರಲ್ಲಿ ಪೊಲೀಸ್ ಕಾಯ್ದೆ ಜಾರಿಗೆ
- 1902 ರಲ್ಲಿ ಪೊಲೀಸ್ ಕಮಿಷನ್ ಕಾಯ್ದೆ ಜಾರಿಗೆ
- ಪ್ರತಿ ಜಿಲ್ಲೆಯನ್ನು ಠಾಣೆಗಳಾಗಿ ವಿಭಜನೆ
- ಠಾಣೆಗಳ ಮುಖ್ಯಸ್ಥರಾಗಿ ಕೊತ್ವಾಲರ ನೇಮಕ
- ಹಳ್ಳಿಗಳಲ್ಲಿ ಚೌಕಿದಾರರ ಮೇಲ್ವಿಚಾರಣೆ

**5.ಬ್ರಿಟಿಷರ ಕಾಲದ ನಾಗರಿಕ ಸೇವಾ ವ್ಯವಸ್ಥೆಯನ್ನು ವಿವರಿಸಿ.**

- ಕಾರ್ನವಾಲೀಸನಿಂದ ನಾಗರಿಕ ಸೇವಾ ವ್ಯವಸ್ಥೆ ಜಾರಿಗೆ
- ತರಬೇತಿಗಾಗಿ ಕಲ್ಕತ್ತಾದಲ್ಲಿ ಫೋರ್ಟ್ ವಿಲಿಯಂ ಕಾಲೇಜು ಸ್ಥಾಪನೆ
- ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ನೇಮಕಾತಿ
- ಭಾರತೀಯರಿಗೆ ಕೆಳದರ್ಜೆಯ ಉದ್ಯೋಗಗಳು ಮಾತ್ರ
- ಭ್ರಷ್ಟಾಚಾರ ತಡೆಗಟ್ಟಲು ರೆಗ್ಯುಲೇಟಿಂಗ್ ಕಾಯ್ದೆ ಜಾರಿ
- ಭಾರತೀಯರ ಸಾಮರ್ಥ್ಯ ಅನುಮಾನಿಸಿದ ಬ್ರಿಟಿಷರು

## ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

**1.ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣವಾದ ರಾಜಕೀಯ ಅಂಶಗಳನ್ನು ವಿವರಿಸಿ.**

- ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿ
- ಸತಾರ, ಜೈಪುರ, ಝಾನ್ಸಿ ಬ್ರಿಟಿಷರ ವಶವಾಗಿದ್ದು
- ತಂಜಾವೂರು ಮತ್ತು ಕರ್ನಾಟಿಕ್ ನವಾಬರಿಗಿದ್ದ ರಾಜ ಪದವಿ ರದ್ದು
- ಮೊಘಲ್ ಚಕ್ರವರ್ತಿ & ಔದ್ ನವಾಬನ ಪದಚ್ಯುತಿ
- ಲಕ್ಷಾಂತರ ಸೈನಿಕರ ನಿರುದ್ಯೋಗ
- ಬ್ರಿಟಿಷರ ವಿರುದ್ಧ ರಾಜರ ಆಕ್ರೋಶ

**2. ಪ್ರಥಮ ಸ್ವಾತಂತ್ರ ಸಂಗ್ರಾಮಕ್ಕೆ ಆರ್ಥಿಕ ಅಂಶಗಳು ಹೇಗೆ ಕಾರಣವಾದವು?**

- ಇಂಗ್ಲೆಂಡಿನಲ್ಲಿ ಉಂಟಾದ ಕೈಗಾರಿಕಾ ಕ್ರಾಂತಿ
- ದೇಶಿಯ ಕೈಗಾರಿಕೆಗಳು ಕ್ಷೀಣಿಸಿದವು
- ಕರಕುಶಲಗಾರರು, ನೇಕಾರರು ನಿರುದ್ಯೋಗಿಗಳಾದರು
- ಭಾರತದ ವಸ್ತುಗಳ ಮೇಲೆ ದುಬಾರಿ ಸುಂಕ ವಿಧಿಸಿದರು
- ಗೃಹ ಕೈಗಾರಿಕೆಗಳು ಆರ್ಥಿಕ ನಷ್ಟ ಅನುಭವಿಸಿದವು
- ಬಟ್ಟೆ ಮತ್ತು ಉಣ್ಣೆ ಕೈಗಾರಿಕೆಗಳು ಅವನತಿ ಹೊಂದಿದವು
- ಇನಾಂ ಆಯೋಗ ನೇಮಿಸಿ ಇನಾಂ ಭೂಮಿಯನ್ನು ವಾಪಸ್ ಪಡೆಯಲಾಯಿತು
- ಜಮೀನ್ದಾರರಿಂದ ಕೃಷಿಕರು ಶೋಷಣೆಗೆ ಒಳಗಾದರು

**3. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣವಾದ ಆಡಳಿತಾತ್ಮಕ ಅಂಶಗಳಾವುವು?**

- ಬ್ರಿಟಿಷರು ಜಾರಿಗೆ ತಂದ ಹೊಸ ಕಾಯ್ದೆಗಳು
- ಕಾನೂನಿನಲ್ಲಿ ಪಕ್ಷಪಾತ
- ಭಾರತೀಯರಿಗೆ ಪ್ರತ್ಯೇಕ ನಿಯಮಗಳ ಅನ್ವಯ
- ಆಂಗ್ಲ ಭಾಷೆಯು ನ್ಯಾಯಾಲಯದ ಭಾಷೆಯಾಯಿತು
- ಇಂಗ್ಲಿಷರ ಪರವಾಗಿ ನ್ಯಾಯದಾನ
- ಹೊಸ ಕಾನೂನಿನ ಆಶಯ ಜನರಿಗೆ ಅರಿವಾಗಲಿಲ್ಲ

**4. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ತತಕ್ಷಣದ ಕಾರಣವೇನು?**

- ಹೊಸದಾಗಿ ಪರಿಚಯಿಸಿದ ರಾಯಲ್ ಎನ್‌ಫೀಲ್ಡ್ ಬಂದೂಕಿನ ತುಪಾಕಿಗಳಿಗೆ ಹಂದಿ ಮತ್ತು ಹಸುವಿನ ಕೊಬ್ಬನ್ನು ಸವರಿದ್ದಾರೆ ಎಂಬ ವದಂತಿ ಹಬ್ಬಿತು

BASAVARAJ D.C. DHARWAD



Use E-Papers, Save Trees
Above line hide when print out

- ಹಸು ಹಿಂದುಗಳಿಗೆ ಪವಿತ್ರವಾದರೆ, ಹಂದಿಯು ಮುಸ್ಲಿಮರಿಗೆ ನಿಷಿದ್ಧವಾಗಿತ್ತು
- ಬಂದೂಕು ಬಳಕೆಯನ್ನು ನಿರಾಕರಿಸಿ ಬ್ಯಾರಕಪುರದಲ್ಲಿ ಸೈನಿಕರು ದಂಗೆಯೆದ್ದರು
- ಮಂಗಲ್ ಪಾಂಡೆ ಎಂಬ ಸೈನಿಕ ಬ್ರಿಟಿಷ್ ಅಧಿಕಾರಿಯನ್ನು ಕೊಂದನು
- ಮಂಗಲ ಪಾಂಡೆಯನ್ನು ಗಲ್ಲಿಗೇರಿಸಲಾಯಿತು
- ಬ್ಯಾರಕಪುರದಲ್ಲಿ ಆರಂಭವಾದ ದಂಗೆ ದೇಶದೆಲ್ಲೆಡೆ ಹರಡಿತು

**5. 1857 ರ ದಂಗೆಯ ವಿಫಲತೆಗೆ ಕಾರಣಗಳೇನು?**

- ಇಡೀ ಭಾರತವನ್ನು ವ್ಯಾಪಿಸಿರಲಿಲ್ಲ
- ರಾಜರ ಸ್ವಹಿತಾಸಕ್ತಿಗಾಗಿ ನಡೆದ ದಂಗೆ
- ಯೋಜಿತ ದಂಗೆಯಾಗಿರದೇ ಅನಿರೀಕ್ಷಿತವಾಗಿತ್ತು
- ಭಾರತೀಯ ಸೈನಿಕರಲ್ಲಿ ಒಗ್ಗಟ್ಟು ಇರಲಿಲ್ಲ
- ಸೂಕ್ತ ಮಾರ್ಗದರ್ಶನ ಮತ್ತು ಸಂಘಟನೆಯ ಕೊರತೆಯಿತ್ತು
- ಸೂಕ್ತ ಸೇನಾ ನಾಯಕತ್ವ ಇರಲಿಲ್ಲ
- ಹೋರಾಟಗಾರರಲ್ಲಿ ನಿಶ್ಚಿತ ಗುರಿ ಇರಲಿಲ್ಲ
- ಕೆಲವು ದೇಶಿಯ ರಾಜರು ಬ್ರಿಟಿಷರಿಗೆ ನಿಷ್ಠೆ ತೋರಿದರು
- ಸೈನಿಕರು ಲೂಟಿ ದರೋಡೆ ಮಾಡಿ ಜನರ ವಿಶ್ವಾಸ ಕಳೆದುಕೊಂಡರು

**6. 1857 ರ ದಂಗೆ /ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಪರಿಣಾಮಗಳಾವುವು?**

- ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಕೊನೆಗೊಂಡಿತು
- ಭಾರತದಲ್ಲಿ ಬ್ರಿಟನ್ ರಾಣಿಯ ಆಡಳಿತ ಆರಂಭವಾಯಿತು
- ಭಾರತದ ವ್ಯವಹಾರವನ್ನು ಕಾರ್ಯದರ್ಶಿಗೆ ಒಪ್ಪಿಸಲಾಯಿತು
- ಭಾರತೀಯರ ಪ್ರೀತಿ ಬೆಂಬಲ ವಿಶ್ವಾಸವಿಲ್ಲದೆ ಆಳ್ವಿಕೆ ಮಾಡಲು ಸಾಧ್ಯವಿಲ್ಲ ಎಂಬುದನ್ನು ಅರಿತರು
- ಶಾಸನ ರೂಪಿಸುವ ಪ್ರಕ್ರಿಯೆಯಲ್ಲಿ ಭಾರತೀಯರನ್ನು ಪರಿಗಣಿಸಲಾಯಿತು
- ಭಾರತೀಯರ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ದಿಕ್ಸೂಚಿ ನೀಡಿತು
- ಹೋರಾಟದ ಪರ್ಯಾಯ ಮಾರ್ಗವನ್ನು ಹುಡುಕಿಕೊಳ್ಳುವ ಅನಿವಾರ್ಯತೆ
- ರಾಣಿಯು ಸರ್ವರನ್ನು ಸಮನಾಗಿ ಕಾಣುವ ಭರವಸೆಯನ್ನು ನೀಡಿದಳು

**7. 1857 ರ ಬ್ರಿಟನ್ ರಾಣಿಯ ಘೋಷಣೆಯಲ್ಲಿದ್ದ ಪ್ರಮುಖ ಅಂಶಗಳು ಯಾವುವು?**

- ಕಂಪನಿಯು ದೇಶಿಯ ರಾಜರೊಂದಿಗೆ ಮಾಡಿಕೊಂಡಿದ್ದ ಒಪ್ಪಂದಗಳನ್ನು ಅಂಗೀಕರಿಸುವುದು
- ಪ್ರಾದೇಶಿಕ ವಿಸ್ತರಣೆಯ ಅಪೇಕ್ಷೆಯನ್ನು ಕೈಬಿಡುವುದು
- ಭಾರತೀಯರಿಗೆ ಸುಭದ್ರ ಸರ್ಕಾರವನ್ನು ನೀಡುವುದು
- ಕಾನೂನಿನ ಮುಂದೆ ಸಮಾನತೆ
- ಭಾರತೀಯರ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡದಿರುವುದು

## ಸ್ವಾತಂತ್ರ್ಯ ಹೋರಾಟ

**1.ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಂದಗಾಮಿಗಳ ಪಾತ್ರವನ್ನು ವಿವರಿಸಿ**

- ಕಾಂಗ್ರೆಸ್ಸಿನ ಆರಂಭಿಕ 20 ವರ್ಷಗಳು ಮಂದಗಾಮಿಗಳ ಯುಗ
- ಇದನ್ನು ಉದಾರ ರಾಷ್ಟ್ರವಾದದ ಕಾಲ ಎನ್ನುವರು
- ಬ್ರಿಟಿಷ್ ಆಳ್ವಿಕೆ ಮತ್ತು ನ್ಯಾಯಪರತೆಯಲ್ಲಿ ನಂಬಿಕೆ
- ಪ್ರಾರ್ಥನೆ ಮತ್ತು ಮನವಿಗಳ ಮೂಲಕ ಬೇಡಿಕೆ ಮಂಡನೆ
- ಜನರಲ್ಲಿ ರಾಜಕೀಯ ಅರಿವು ಮೂಡಿಸಿದರು
- ಬ್ರಿಟಿಷ್ ಆಳ್ವಿಕೆಯ ದುಷ್ಪರಿಣಾಮಗಳ ಅವಲೋಕನ
- ಪ್ರಮುಖ ನಾಯಕರು ದಾದಾಬಾಯಿ ನವರೋಜಿ, ರಾನಡೆ, ಗೋಖಲೆ.

ಪ್ರಮುಖ ಬೇಡಿಕೆಗಳು

- ದೇಶದ ಕೈಗಾರಿಕೆಗಳ ಅಭಿವೃದ್ಧಿ
- ಸೈನಿಕ ವೆಚ್ಚ ಕಡಿಮೆ ಮಾಡುವುದು
- ಉತ್ತಮ ಶಿಕ್ಷಣ ನೀಡುವುದು
- ಬಡತನದ ಅಧ್ಯಯನ ಮತ್ತು ಪರಿಹಾರ

**2. ಭಾರತದ ಸ್ವಾತಂತ್ರ ಹೋರಾಟದಲ್ಲಿ ತೀವ್ರಗಾಮಿಗಳ ಪಾತ್ರವನ್ನು ವಿವರಿಸಿ.**

- ಮಂದಗಾಮಿಗಳನ್ನು 'ರಾಜಕೀಯ ಭಿಕ್ಷುಕರು' ಎಂದು ಕರೆದರು
- ಬ್ರಿಟಿಷರ ಬಗ್ಗೆ ತೀವ್ರವಾದ ನಿಲುವು ಪ್ರತಿಪಾದಿಸಿದರು
- ಬಂಗಾಳ ವಿಭಜನೆಯನ್ನು ವಿರೋಧಿಸಿದರು
- ಪೂರ್ಣ ಸ್ವರಾಜ್ಯದ ಗುರಿ
- ಪ್ರಮುಖ ನಾಯಕರು ಲಾಲ ಬಾಲ ಪಾಲ
- ತಿಲಕರು "ಸ್ವರಾಜ್ಯವೇ ನನ್ನ ಜನ್ಮಸಿದ್ಧ ಹಕ್ಕು ಅದನ್ನು ಪಡೆದೇ ತೀರುವೆ" ಎಂದು ಘೋಷಿಸಿದರು
- ಬಂಗಾಳ ವಿಭಜನೆ ಹಿಂಪಡೆಯುವಂತೆ ಮಾಡಿದರು
- ಸ್ವದೇಶಿ ಆಂದೋಲನ ಸಂಘಟಿಸಿದರು
- ಜನಸಾಮಾನ್ಯರನ್ನು ರಾಷ್ಟ್ರೀಯ ಹೋರಾಟಕ್ಕೆ ಪ್ರೇರೇಪಿಸಿದರು

**3. ಸ್ವಾತಂತ್ರ್ಯ ಚಳುವಳಿಯಲ್ಲಿ ತಿಲಕರ ಪಾತ್ರವನ್ನು ವಿವರಿಸಿ.**

- ಪ್ರಮುಖ ತೀವ್ರವಾದಿ ನಾಯಕರಾಗಿದ್ದರು
- "ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ಅದನ್ನು ಪಡೆದೇ ತೀರುವೆ" ಎಂದು ಘೋಷಿಸಿದರು
- ಗಣೇಶ, ಶಿವಾಜಿ, ದುರ್ಗಾ ಉತ್ಸವಗಳ ಮೂಲಕ ಜನರ ಸಂಘಟನೆ
- ಕೇಸರಿ ಮತ್ತು ಮರಾಠ ಪತ್ರಿಕೆಗಳ ಆರಂಭ
- ಕ್ರಾಂತಿಕಾರಕ ಬರವಣಿಗೆಗಳ ಮೂಲಕ ಜನರ ಪ್ರೇರೇಪಣೆ
- ಜೈಲಿನಲ್ಲಿದ್ದುಕೊಂಡು "ಗೀತಾರಹಸ್ಯ" ಗ್ರಂಥರಚನೆ

BASAVARAJ D.C. DHARWAD



Use E-Papers, Save Trees
Above line hide when print out

- ಜನಸಾಮಾನ್ಯರನ್ನು ಹೋರಾಟಕ್ಕಾಗಿ ಸಂಘಟಿಸಿದರು
- ಸ್ವದೇಶಿ ಚಳುವಳಿಗೆ ಪ್ರೇರೇಪಿಸಿದರು

**4. ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಾಂತಿಕಾರಿಗಳ ಪಾತ್ರವೇನು?**

- ಹಿಂಸಾತ್ಮಕ ಮಾರ್ಗದಲ್ಲಿ ನಂಬಿಕೆ
- ರಹಸ್ಯ ಸಂಘಗಳ ಮೂಲಕ ಕಾರ್ಯಾಚರಣೆ
- ಇಂಗ್ಲೆಂಡಿನಲ್ಲಿ ಲೋಟಸ್ ಮತ್ತು ಡಾಗರ್ ಸಂಘಟನೆ ಸ್ಥಾಪನೆ
- ಭಾರತದಲ್ಲಿ ಅನುಶೀಲನ ಸಮಿತಿ ಮತ್ತು ಅಭಿನವ ಭಾರತದ ಹುಟ್ಟು
- ಅಮೆರಿಕದಲ್ಲಿ ಗಧರ್ ಕ್ರಾಂತಿಕಾರಿ ಸಂಘಟನೆ ಸ್ಥಾಪನೆ
- ಗುರಿ ಸಾಧನೆಗಾಗಿ ಬಾಂಬುಗಳ ಮತ್ತು ಬಂದೂಕುಗಳ ಪ್ರಯೋಗ
- ಕೊಲೆಯ ಸಂಚಿನ ಆರೋಪದ ಮೇಲೆ ಬಂಧಿಸಿ ಗಲ್ಲಿಗೇರಿಸಲಾಯಿತು
- **ಪ್ರಮುಖ ಕ್ರಾಂತಿಕಾರಿಗಳು** ಭಗತ ಸಿಂಗ್, ಚಂದ್ರಶೇಖರ್ ಆಜಾದ್, ವಿ ಡಿ ಸಾವರ್ಕರ್, ಅರವಿಂದ ಘೋಷ್, ರಾಜಗುರು, ಚಂಪುಕರ್, ರಾಸ್ ಬಿಹಾರಿ ಬೋಸ್, ಖುದಿರಾಮ್ ಬೋಸ್, ಮೇಡಂ ಕಾಮಾ.

**5. ಸಂಪತ್ತಿನ ಸೋರುವಿಕೆ ಸಿದ್ಧಾಂತವನ್ನು ವಿವರಿಸಿ.**

- ದಾದಾಬಾಯಿ ನವರೋಜಿ ಈ ಸಿದ್ದಾಂತ ಮಂಡಿಸಿದರು
- ಬ್ರಿಟಿಷರ ಆಳ್ವಿಕೆಯ ದುಷ್ಪರಿಣಾಮ ವಿವರಿಸಿದರು
- ಭಾರತದ ಸಂಪತ್ತು ಇಂಗ್ಲೆಂಡಿಗೆ ಸೋರಿಕೆಯಾಗುವ ಬಗ್ಗೆ ತಿಳಿಸಿದರು
- ಭಾರತದ ಸಂಪತ್ತನ್ನು ಬರಿದು ಮಾಡಿದ ರೀತಿಯನ್ನು ವಿಶ್ಲೇಷಿಸಿದರು

ಕಾರಣಗಳು

- ಆಮದು ಹೆಚ್ಚಿಸಿ ರಫ್ತು ಕಡಿಮೆ ಮಾಡಿದ್ದು
- ಬ್ರಿಟಿಷ್ ಅಧಿಕಾರಿಗಳಿಗೆ ನೀಡುತ್ತಿದ್ದ ವೇತನ
- ಆಡಳಿತಾತ್ಮಕ ವೆಚ್ಚ
- ನಿವೃತ್ತಿ ವೇತನವನ್ನು ಭಾರತವೇ ಭರಿಸಬೇಕಾಗಿದ್ದು

**6. ಬಂಗಾಳ ವಿಭಜನೆಯನ್ನು ಹಿಂಪಡೆಯಲು ಕಾರಣಗಳೇನು?**

- ಭೌಗೋಳಿಕ ವೈಶಾಲ್ಯತೆ ನೆಪವೊಡ್ಡಿ 1905ರಲ್ಲಿ ಬಂಗಾಳದ ವಿಭಜನೆ
- ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ತೀವ್ರವಾಗಿ ವಿರೋಧಿಸಿತು
- ಹಿಂದೂ-ಮುಸ್ಲಿಂ ಭಾವೈಕ್ಯತೆಗಾಗಿ ರಕ್ಷಾಬಂಧನ ಆಚರಣೆ
- ಸ್ವದೇಶಿ ಚಳುವಳಿಯ ಆರಂಭ
- ವಿದೇಶಿ ವಸ್ತುಗಳ ಬಹಿಷ್ಕಾರ
- ಬಂಗಾಳಿ ಭಾಷೆ ಹಿಂದೂ ಮುಸ್ಲಿಮರನ್ನು ಒಗ್ಗೂಡಿಸಿತು
- ವಿಭಜನೆ ವಿರುದ್ಧ ದೇಶಾದ್ಯಂತ ಪ್ರತಿರೋಧಗಳು ವ್ಯಕ್ತವಾದವು
- ತೀವ್ರ ಪ್ರತಿಭಟನೆ ಹಿನ್ನೆಲೆ 1911 ರಲ್ಲಿ ವಿಭಜನೆ ಹಿಂಪಡೆದರು

## ಭಾರತದ ಸಮಸ್ಯೆಗಳು ಮತ್ತು ಅವುಗಳ ಪರಿಹಾರೋಪಾಯಗಳು

**1.ಕೋಮುವಾದ ದೇಶದ ಐಕ್ಯತೆಗೆ ಮಾರಕ. ಹೇಗೆ?**

- ಧರ್ಮದ ಆಧಾರದಲ್ಲಿ ಸಮಾಜದ ವಿಭಜನೆಯೇ ಕೋಮುವಾದ
- ಪರಸ್ಪರ ಅಪನಂಬಿಕೆ ಮತ್ತು ಭಯದ ವಾತಾವರಣ ಸೃಷ್ಟಿ
- ಸಮಾಜದಲ್ಲಿ ಗುಂಪುಗಾರಿಕೆಗೆ ಕಾರಣವಾಗುತ್ತದೆ
- ಆರ್ಥಿಕ ವೈಷಮ್ಯ ಮತ್ತು ರಾಜಕೀಯ ಪೈಪೋಟಿ ಪ್ರಕಟ
- ವ್ಯಕ್ತಿಗಳ ಜೀವ ಮತ್ತು ಸ್ವತ್ತುಗಳ ನಾಶ
- ಗುಂಪುಗಳ ಮಧ್ಯೆ ಪರಸ್ಪರ ದೋಷಾರೋಪಣೆ, ದೈಹಿಕ ಹಲ್ಲೆ
- ರಾಷ್ಟ್ರೀಯ ಹಿತಾಸಕ್ತಿಗಿಂತ ಗುಂಪಿನ ಹಿತಾಸಕ್ತಿಗೆ ಪ್ರಾಮುಖ್ಯತೆ
- ಸಮಾಜದ ನೆಮ್ಮದಿ ಹಾಳು ಮಾಡುತ್ತದೆ

**2. ಭಾರತದಲ್ಲಿ ನಿರುದ್ಯೋಗ ಹೆಚ್ಚಳವಾಗುತ್ತಿರುವ ಕಾರಣಗಳೇನು?**

- ಮಿತಿಮೀರಿದ ಜನಸಂಖ್ಯೆ
- ಹೆಚ್ಚಾದ ತಂತ್ರಜ್ಞಾನ ಬಳಕೆ
- ನೈಸರ್ಗಿಕ ಸಂಪನ್ಮೂಲಗಳ ಕೊರತೆ
- ಕೃಷಿಯ ಮೇಲೆ ಅಧಿಕ ಅವಲಂಬನೆ
- ಗೃಹ ಕೈಗಾರಿಕೆಗಳ ನಾಶ
- ಕೌಶಲ್ಯ ಆಧಾರಿತ ಶಿಕ್ಷಣದ ಕೊರತೆ

**3. ನಿರುದ್ಯೋಗ ನಿವಾರಣೆಗೆ ಕೈಗೊಂಡ ಕ್ರಮಗಳಾವುವು?**

- ಉದ್ಯೋಗ ಸೃಷ್ಟಿ ಕಾರ್ಯಕ್ರಮಗಳ ಜಾರಿ
- ಕೌಶಲ್ಯ ಆಧಾರಿತ ಗುಣಮಟ್ಟದ ಶಿಕ್ಷಣ ನೀಡಿಕೆ
- ಸ್ವಯಂ ಉದ್ಯೋಗಗಳಿಗೆ ಸಾಲ ಸೌಲಭ್ಯ
- ಗುಣಮಟ್ಟದ ತಾಂತ್ರಿಕ ಶಿಕ್ಷಣ ನೀಡಿಕೆ
- ವೃತ್ತಿ ಶಿಕ್ಷಣ
- ಸರ್ಕಾರದಿಂದ ಸಹಾಯಧನ

**4. ಭ್ರಷ್ಟಾಚಾರಕ್ಕೆ ಕಾರಣಗಳೇನು?**

- ಲಂಚ ಅಥವಾ ಇನ್ನಾವುದೇ ಕಾನೂನುಬಾಹಿರ ಕ್ರಮಕ್ಕೆ ಪ್ರಚೋದನೆ ನೀಡಿಕೆ
- ಲಂಚಗುಳಿತನ
- ಸ್ವಜನಪಕ್ಷಪಾತ
- ಜಾತೀಯತೆ
- ನಿಧಾನ ದ್ರೋಹ
- ಕಟ್ಟುನಿಟ್ಟಿನ ಮೇಲ್ವಿಚಾರಣೆ ಕೊರತೆ
- ವೈಯಕ್ತಿಕ ಲಾಭ
- ದುರ್ಬಲ ಕಾನೂನು ವ್ಯವಸ್ಥೆ

**5. ಭ್ರಷ್ಟಾಚಾರದಿಂದ ಉಂಟಾಗುವ ಪರಿಣಾಮಗಳು ಯಾವುವು?**

- ತೆರಿಗೆ ಕಳ್ಳತನ
- ಅಕ್ರಮ ದಾಸ್ತಾನು
- ಆರ್ಥಿಕ ವಂಚನೆ

BASAVARAJ D.C. DHARWAD



Use E-Papers, Save Trees
Above line hide when print out

- ವಿದೇಶಿ ವಿನಿಮಯ ಕಾನೂನು ಉಲ್ಲಂಘನೆ
- ಔದ್ಯೋಗಿಕ ವಂಚನೆ
- ಕಳ್ಳ ಸಾಗಾಣಿಕೆ
- ವ್ಯವಸ್ಥಿತ ಅಪರಾಧಗಳಿಗೆ ಎಡೆಮಾಡಿಕೊಡುತ್ತದೆ
- ಅಧಿಕಾರಶಾಹಿಯಲ್ಲಿ ಲೋಪದೋಷ, ವಂಚನೆಗೆ ಅನುವು

**6. ಭ್ರಷ್ಟಾಚಾರವನ್ನು ನಿಯಂತ್ರಿಸುವ/ನಿರ್ಮೂಲನೆ ಮಾಡುವ ಕ್ರಮಗಳನ್ನು ವಿವರಿಸಿ.**

- ಪ್ರಬಲ ರಾಜಕೀಯ ಇಚ್ಛಾಶಕ್ತಿ
- ಸಾರ್ವಜನಿಕ ಸಹಕಾರ
- ಉತ್ತಮ ಅಧಿಕಾರಿ ವರ್ಗ
- ಲೋಕಪಾಲ್ ಮತ್ತು ಲೋಕಾಯುಕ್ತ ಸಂಸ್ಥೆಗಳ ಸ್ಥಾಪನೆ
- ಸಿಸಿ ಕ್ಯಾಮೆರಾ ಅಳವಡಿಕೆ
- ಕಾರ್ಯನಿರ್ವಹಣೆಯ ವೇಗ ಹೆಚ್ಚಳ
- ಕಠಿಣ ಶಿಕ್ಷೆ ವಿಧಿಸುವುದು
- ಶೀಘ್ರ ನ್ಯಾಯ ನಿರ್ಣಯ

**7. ಕೋಮುವಾದವನ್ನು ನಿಯಂತ್ರಿಸುವ ಕ್ರಮಗಳನ್ನು ಚರ್ಚಿಸಿ**

- ಏಕರೂಪ ನಾಗರಿಕ ಸಂಹಿತೆ
- ಜಾತ್ಯತೀತ ಮನೋಭಾವ
- ಮೇಲುಸ್ತರದ ರಾಷ್ಟ್ರೀಯ ಚಿಂತನೆ
- ಸಮಗ್ರತೆ, ಸಮಾನತೆ, ಸೋದರತೆಗೆ ಪ್ರಾಶಸ್ತ್ಯ
- ಎಲ್ಲ ನಾಗರಿಕರನ್ನು ಸಮನಾಗಿ ಕಾಣುವುದು
- ಸಾಮಾಜಿಕ-ಆರ್ಥಿಕ ತಾರತಮ್ಯ ನಿವಾರಣೆ

**8. ಮಹಿಳೆಯರ ಸ್ಥಾನಮಾನ ಉತ್ತಮಪಡಿಸಲು ಕೈಗೊಂಡ ಕ್ರಮಗಳಾವುವು?**

- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪ್ರಾರಂಭ
- ಮಹಿಳೆಯರ ಆರೋಗ್ಯ, ಶಿಕ್ಷಣ ಉತ್ತಮ ಪಡಿಸಲು ಕ್ರಮ
- ಬಾಲ್ಯವಿವಾಹ ವರದಕ್ಷಿಣೆ ನಿಷೇಧ ಕಾಯ್ದೆ
- ಗ್ರಾಮಾಂತರ ಮಹಿಳೆಯರ ವಿಕಾಸಕ್ಕಾಗಿ ಕರ್ನಾಟಕ ಸರ್ಕಾರದಿಂದ “ಸ್ತ್ರೀಶಕ್ತಿ” ಕಾರ್ಯಕ್ರಮ
- ಸ್ವ ಉದ್ಯೋಗಕ್ಕಾಗಿ ಸಾಲ ಸೌಲಭ್ಯ ಮತ್ತು ಸಬ್ಸಿಡಿ
- ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಮಹಿಳಾ ಆಯೋಗ ರಚನೆ
- ಉದ್ಯೋಗ ಮತ್ತು ರಾಜಕೀಯ ಮೀಸಲಾತಿ

**9. ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಕೈಗೊಂಡ ಕ್ರಮಗಳು ಯಾವುವು?**

- ಸಂವಿಧಾನದ 371ನೇ ವಿಧಿಗೆ A ಇಂದ Jವರೆಗೆ ಸೇರ್ಪಡೆ
- ಹಿಂದುಳಿದ ಪ್ರದೇಶಗಳಿಗೆ ವಿಶೇಷ ಸ್ಥಾನಮಾನ
- ಕರ್ನಾಟಕದಲ್ಲಿ 2002ರಲ್ಲಿ ಡಿ ಎಂ ನಂಜುಂಡಪ್ಪ ಸಮಿತಿ ನೇಮಕ
- **371(J)** ಮೂಲಕ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ

## ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ

**1.ಭಾರತ ಮತ್ತು ರಷ್ಯಾ ನಡುವಿನ ಬಾಂಧವ್ಯವನ್ನು ವಿವರಿಸಿ**

- ಭಾರತ ಮತ್ತು ರಷ್ಯಾ ಉತ್ತಮ ಬಾಂಧವ್ಯ ಹೊಂದಿವೆ
- 1962ರ ಚೈನಾ ದಾಳಿಯನ್ನು ರಷ್ಯಾ ಖಂಡಿಸಿತು
- 1961ರ ಗೋವಾ ವಿಮೋಚನೆ ಸಂದರ್ಭದಲ್ಲಿ ರಷ್ಯಾ ಸಹಕರಿಸಿತು
- 1966ರ ತಾಸ್ಕೆಂಟ್ ನಲ್ಲಿ ಭಾರತ-ಪಾಕ್ ಒಪ್ಪಂದಕ್ಕೆ ರಷ್ಯಾ ಮಧ್ಯಸ್ಥಿಕೆ
- 1971 ರಲ್ಲಿ 20 ವರ್ಷಗಳ ಶಾಂತಿ ಸಹಕಾರ ಮತ್ತು ಮೈತ್ರಿ ಒಪ್ಪಂದ
- ಭಿಲಾಯಿ ಮತ್ತು ಬೊಕಾರೋ ಉಕ್ಕಿನ ಕಾರ್ಖಾನೆಗಳಿಗೆ ರಷ್ಯಾ ನೆರವು
- ರಾಷ್ಟ್ರದ ಕೈಗಾರಿಕೆ ಮತ್ತು ವಾಣಿಜ್ಯ ಪ್ರಗತಿಗೆ ರಷ್ಯಾದ ನೆರವು
- ವಿಶ್ವಸಂಸ್ಥೆಯಲ್ಲಿ ಭಾರತಕ್ಕೆ ಖಾಯಂ ಸ್ಥಾನ ನೀಡುವಂತೆ ರಷ್ಯಾದ ಪ್ರತಿಪಾದನೆ

**2. ಭಾರತ ಮತ್ತು ಅಮೆರಿಕ ನಡುವಿನ ಸಂಬಂಧವನ್ನು ವಿವರಿಸಿ.**

- ಭಾರತ ಮತ್ತು ಅಮೆರಿಕ ಬೃಹತ್ ಪ್ರಜಾತಂತ್ರ ರಾಷ್ಟ್ರಗಳಾಗಿವೆ
- ಭಾರತದ ಪಂಚವಾರ್ಷಿಕ ಯೋಜನೆಗಳಿಗೆ ಸಹಾಯ
- 1962ರಲ್ಲಿ ಭಾರತದ ಮೇಲೆ ಚೀನಾ ದಾಳಿ ಸಂದರ್ಭದಲ್ಲಿ ನೆರವು
- ಭಯೋತ್ಪಾದನೆ ಹತ್ತಿಕ್ಕುವಲ್ಲಿ ಸಮಾನ ಹಿತಾಸಕ್ತಿ
- ವಿಶ್ವಸಂಸ್ಥೆ ಬಲಪಡಿಸುವಲ್ಲಿ ಸಮಾನ ಧೋರಣೆ
- ವಿದೇಶಿ ವ್ಯಾಪಾರ, ವಿಜ್ಞಾನ- ತಾಂತ್ರಿಕತೆ, ಬಾಹ್ಯಾಕಾಶ, ಶಿಕ್ಷಣ ಕ್ಷೇತ್ರಗಳಲ್ಲಿ ಉತ್ತಮ ಬಾಂಧವ್ಯ
- ಕೆಲವು ಬಾರಿ ಅಮೆರಿಕದ ನೀತಿ ಭಾರತಕ್ಕೆ ವಿರುದ್ಧವಾಗಿದೆ
- ಭಾರತ ಮತ್ತು ಪಾಕಿಸ್ತಾನ ಯುದ್ಧ ಸಂದರ್ಭದಲ್ಲಿ ಪಾಕಿಸ್ತಾನಕ್ಕೆ ಸಹಾಯ ನೀಡಿತು
- ಭಾರತ ಅಮೆರಿಕದ ಧೋರಣೆಗನುಗುಣವಾಗಿ ತನ್ನ ವಿದೇಶಾಂಗ ನೀತಿಯನ್ನು ಸಿದ್ಧಪಡಿಸುತ್ತದೆ

**3. ಭಾರತ ಮತ್ತು ಪಾಕಿಸ್ತಾನ ಮಧ್ಯೆ ಉದ್ವಿಗ್ನತೆಗೆ/ ಸಂಬಂಧ ಹದಗೆಡಲು ಕಾರಣವಾದ ಅಂಶಗಳಾವುವು?**

- ಜಮ್ಮು ಕಾಶ್ಮೀರ ಸಮಸ್ಯೆ
- ಭಯೋತ್ಪಾದನೆ
- ನದಿ ನೀರಿನ ಹಂಚಿಕೆ ವಿವಾದ
- ಎರಡು ರಾಷ್ಟ್ರಗಳ ನಡುವೆ ನಡೆದ ಮೂರು ಯುದ್ಧಗಳು
- 2001ರ ಭಾರತ ಸಂಸತ್ತಿನ ಮೇಲಿನ ದಾಳಿ
- 2008ರ ಮುಂಬೈ ದಾಳಿ
- 2016ರ ಪಠಾಣ ಕೋಟ್ ದಾಳಿ

**4. ಭಾರತ ಮತ್ತು ಪಾಕಿಸ್ತಾನ ಸಂಬಂಧ ವೃದ್ಧಿಗೆ ಅಥವಾ ಸುಧಾರಣೆಗೆ ಕೈಗೊಂಡ ಕ್ರಮಗಳಾವುವು?**

- ತಾಸ್ಕೆಂಟ್ ಒಪ್ಪಂದ

BASAVARAJ D.C. DHARWAD



Use E-Papers, Save Trees
Above line hide when print out

- ಲಾಹೋರ್ ಬಸ್ ಯಾತ್ರೆ
- ಆಗ್ರಾ ಶೃಂಗ ಸಭೆ
- ನಿರಂತರವಾಗಿರುವ ದ್ವಿಪಕ್ಷೀಯ ಮಾತುಕತೆ
- ಸಂಸ್ಕೃತಿ ಮತ್ತು ಆರ್ಥಿಕ ವಿಷಯಗಳಲ್ಲಿ ಪರಸ್ಪರ ವಿನಿಮಯ
- ವ್ಯಾಪಾರ-ವಾಣಿಜ್ಯ ಸಂಬಂಧಗಳ ನಿರಂತರತೆ
- ಕ್ರೀಡೆ ವ್ಯವಹಾರ ನೈಸರ್ಗಿಕ ವಿಕೋಪ ಸಂದರ್ಭದಲ್ಲಿ ಪರಸ್ಪರ ಸಹಕಾರ

**5. ಭಾರತ ಮತ್ತು ಚೀನಾ ನಡುವಿನ ಸಂಬಂಧವನ್ನು ವಿವರಿಸಿ**

- ಭಾರತ ಮತ್ತು ಚೀನಾ ಸಂಬಂಧ ಪ್ರಾಚೀನ ಕಾಲದಿಂದಿದೆ
- ಪಂಚಶೀಲ ತತ್ವ ಒಪ್ಪಂದಕ್ಕೆ ಸಹಿ ಹಾಕಿವೆ
- ಭಾರತದೊಂದಿಗೆ ದೊಡ್ಡಮಟ್ಟದಲ್ಲಿ ವ್ಯಾಪಾರ ಸಂಬಂಧ ಹೊಂದಿದೆ
- ಭಾರತದ ಬೌದ್ಧ ಧರ್ಮ ಚೀನಾದಲ್ಲಿ ಪ್ರಸಾರಗೊಂಡಿದೆ
- ಎರಡು ರಾಷ್ಟ್ರಗಳ ಪ್ರಯತ್ನದಿಂದ ಬ್ರಿಕ್ಸ್ ಪ್ರಾರಂಭವಾಗಿದೆ
- ವಿಶ್ವದ ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿರುವ ರಾಷ್ಟ್ರಗಳಾಗಿವೆ
- ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಚೀನಾದ ರೇಷ್ಮೆ ಉಲ್ಲೇಖವಿದೆ
- ರಾಯಭಾರ ಸಂಬಂಧಗಳ ನಿರಂತರತೆ

**6. ಭಾರತ ಮತ್ತು ಚೀನಾ ಸಂಬಂಧಕ್ಕೆ ಅಡ್ಡಿಯಾಗಿರುವ ಅಂಶಗಳಾವುವು?**

- ಟಿಬೆಟ್ ವಿವಾದ
- 1962 ರ ಭಾರತ ಚೀನಾ ಯುದ್ಧ
- ಗಡಿ ಸಮಸ್ಯೆ
- ಭಾರತದ ಅರುಣಾಚಲ ಪ್ರದೇಶ ತನಗೆ ಸೇರಬೇಕೆಂಬ ಚೀನಾದ ವಾದ
- ಪಾಕಿಸ್ತಾನದ ಪರವಾಗಿರುವ ಚೀನಾ ನೀತಿ

## ಸಾಮಾಜಿಕ ಸ್ತರವಿನ್ಯಾಸ

**1.ಅಸ್ಪೃಶ್ಯತೆ ನಿವಾರಣೆಗೆ ಕೈಗೊಂಡ ಕ್ರಮಗಳಾವುವು?**

- 17ನೇ ವಿಧಿ- ಅಸ್ಪೃಶ್ಯತೆ ಆಚರಣೆ ನಿಷೇಧಿಸಿದೆ
- 1955 ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ
- 1976 ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ
- ಸಾರ್ವತ್ರಿಕ ಮತದಾನದ ಹಕ್ಕು
- ಸಮಾನತೆ ಮತ್ತು ಸ್ವಾತಂತ್ರ್ಯದ ಹಕ್ಕು
- ಮೀಸಲಾತಿ ಸೌಲಭ್ಯ

**2. ಸಾಮಾಜಿಕ ಸ್ತರವಿನ್ಯಾಸದ ವಿವಿಧ ರೂಪಗಳಾವುವು?**

- ಆದಿವಾಸಿ ಸಮಾಜ
- ಗುಲಾಮಗಿರಿ
- ಎಸ್ಟೇಟ್ಸ್ ಪದ್ಧತಿ
- ವರ್ಣವ್ಯವಸ್ಥೆ
- ಜಾತಿ ವ್ಯವಸ್ಥೆ

**3. ಅಸ್ಪೃಶ್ಯತೆಯು ಒಂದು ಸಾಮಾಜಿಕ ಪಿಡುಗು ಚರ್ಚಿಸಿ.**

- ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ಯಂತ ಕೆಳಮಟ್ಟದ ಸ್ಥಾನ
- ಶೈಕ್ಷಣಿಕ ಅವಕಾಶಗಳಿಂದ ಹೊರಗಿಡಲಾಗಿತ್ತು
- ಆಸ್ತಿಯ ಒಡೆತನದ ಹಕ್ಕಿನ ನಿರಾಕರಣೆ
- ರಾಜಕೀಯ ಭಾಗವಹಿಸುವಿಕೆ ನಿರಾಕರಣೆ

**4. ಸಾಮಾಜಿಕ ಸ್ತರವಿನ್ಯಾಸದ ಲಕ್ಷಣಗಳನ್ನು ವಿಶ್ಲೇಷಿಸಿ.**

- ಸಾಮಾಜಿಕವಾದದ್ದು
- ಸರ್ವ ವ್ಯಾಪಕವಾದದ್ದು
- ಪುರಾತನವಾದದ್ದು
- ವಿವಿಧ ರೂಪಗಳಲ್ಲಿದೆ

**5. ಶಿಕ್ಷಣದಲ್ಲಿ ಸಮಾನತೆ ತರಲು ಭಾರತ ಹೇಗೆ ಪ್ರಯತ್ನಿಸುತ್ತಿದೆ?**

- 6 ರಿಂದ 14 ವರ್ಷದ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ
- 21ಎ- ಶಿಕ್ಷಣ ಮಕ್ಕಳ ಮೂಲಭೂತ ಹಕ್ಕಾಗಿದೆ
- 45ನೇ ವಿಧಿ- 6 ವರ್ಷದೊಳಗಿನ ಮಕ್ಕಳ ಶಿಕ್ಷಣ ಅವಕಾಶ
- 30ನೇ ವಿಧಿ- ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳಿಗೆ ವಿಶೇಷ ಅವಕಾಶ
- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಶೈಕ್ಷಣಿಕ ಆಸಕ್ತಿಗಳಿಗೆ ಬೆಂಬಲ
- 19ನೇ ವಿಧಿ- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ

## ಗ್ರಾಮೀಣಾಭಿವೃದ್ಧಿ

**1.ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರವೇನು?**

- ಮೂಲ ಸೌಕರ್ಯಗಳನ್ನು ಒದಗಿಸುವುದು
- ಆರೋಗ್ಯ ಮತ್ತು ನೈರ್ಮಲ್ಯ ಕಾಪಾಡುವುದು
- ಬಡತನ ನಿರ್ಮೂಲನೆ ಯೋಜನೆ ಅನುಷ್ಠಾನ
- ವಸತಿಹೀನರಿಗೆ ಮನೆ ನಿರ್ಮಿಸಿ ಕೊಡುವುದು
- ಪಡಿತರ ವ್ಯವಸ್ಥೆ ಬಲಪಡಿಸುವುದು
- ಗ್ರಾಮೀಣ ಕಲೆಗಳನ್ನು ಬೆಳೆಸುವುದು
- ಕೃಷಿ ನೀರಾವರಿ ವಿಸ್ತರಣೆ
- ಮಹಿಳೆಯರ ದುರ್ಬಲರ ಪ್ರಗತಿ

**2. ಪಂಚಾಯತ್ ರಾಜ್ ವ್ಯವಸ್ಥೆಯ ಗುಣಲಕ್ಷಣಗಳನ್ನು ತಿಳಿಸಿ.**

- ಮೂರು ಹಂತದ ಪಂಚಾಯತ್ ವ್ಯವಸ್ಥೆ
- ಜಿಲ್ಲಾ ಪಂಚಾಯಿತಿ ತಾಲ್ಲೂಕು ಪಂಚಾಯಿತಿ ಗ್ರಾಮ ಪಂಚಾಯಿತಿ
- ನೇರ ಮತ್ತು ನಿಯಮಿತ ಚುನಾವಣೆಗಳು
- SC.ST.OBC, ಮಹಿಳೆಯರಿಗೆ ಮೀಸಲಾತಿ
- ಹಣಕಾಸಿನ ಜವಾಬ್ದಾರಿ ನೀಡಿಕೆ
- ಕಾರ್ಯನಿರ್ವಾಹಕ ಮತ್ತು ಇತರೆ ಸಿಬ್ಬಂದಿ ನೀಡಿಕೆ
- ವಿಸರ್ಜಿಸಿದ ಆರು ತಿಂಗಳೊಳಗೆ ಚುನಾವಣೆ

**3. ಯಾವುದಾದರೂ ಮೂರು ವಸತಿ ಯೋಜನೆಗಳನ್ನು ಹೆಸರಿಸಿ**

- ಆಶ್ರಯ ಯೋಜನೆ
- ಪ್ರಧಾನ ಮಂತ್ರಿ ಆವಾಸ್ ಯೋಜನೆ

BASAVARAJ D.C. DHARWAD



Use E-Papers, Save Trees
Above line hide when print out

- ಅಂಬೇಡ್ಕರ್ ವಾಲ್ಮೀಕಿ ವಸತಿ ಯೋಜನೆ

**4. ಗ್ರಾಮೀಣಾಭಿವೃದ್ಧಿಯ ಮಹತ್ವವನ್ನು ವಿವರಿಸಿ**

- ಸರಕು-ಸೇವೆಗಳ ಬೇಡಿಕೆ ಹೆಚ್ಚಳ
- ಉದ್ಯೋಗ ಸೃಷ್ಟಿ
- ರಾಷ್ಟ್ರೀಯ ಆದಾಯ ಹೆಚ್ಚಳ
- ಬಡತನ ಇಳಿಕೆ
- ಜನರ ಜೀವನ ಮಟ್ಟ ಸುಧಾರಣೆ
- ಕೃಷಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ

**5. ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ವಿವರಿಸಿ.**

- ಗ್ರಾಮದ ಅಧಿಕಾರ & ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮಸ್ಥರಿಗೆ ವಹಿಸುವುದು
- ಅಧಿಕಾರ ಹಂಚಿಕೆಯ ಒಂದು ಪ್ರಕ್ರಿಯೆ
- ಜನರ ಪಾಲುದಾರಿಕೆ ಹೆಚ್ಚಳ
- ತಳಮಟ್ಟದಿಂದ ಯೋಜನೆ ನಿರೂಪಿಸುವಿಕೆ
- ಇದು ಎಲ್ಲ ರೀತಿಯ ಶೋಷಣೆ ತಡೆಯುತ್ತದೆ
- ಮಾನವೀಯ ಮೌಲ್ಯಗಳ ವೃದ್ಧಿ
- ಮಾನವನ ಸ್ವಾತಂತ್ರ್ಯ ಘನತೆ ಸಂರಕ್ಷಣೆ

**6. ಗ್ರಾಮೀಣ ಅಭಿವೃದ್ಧಿಗಾಗಿ ಇರುವ ಅವಶ್ಯಕ ಕ್ರಮಗಳು ಯಾವುವು?**

- ಮಾನವ ಸಂಪನ್ಮೂಲ ಅಭಿವೃದ್ಧಿ
- ನೈರ್ಮಲ್ಯ ಮತ್ತು ಆರೋಗ್ಯ ಸುಧಾರಣೆ
- ಭೂಸುಧಾರಣೆ
- ಸ್ಥಳೀಯ ಉತ್ಪಾದಕ ಸಂಪನ್ಮೂಲಗಳ ಅಭಿವೃದ್ಧಿ
- ಮೂಲಭೂತ ಸೌಕರ್ಯಗಳ ಅಭಿವೃದ್ಧಿ
- ಬಡತನ ನಿರ್ಮೂಲನೆ

**7. ಮಹಿಳಾ ಸಬಲೀಕರಣದಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಪಾತ್ರವೇನು?**

- ಗ್ರಾಮೀಣ ಮಹಿಳೆಯರ ಸಂಘಟನೆ
- ಆರ್ಥಿಕ ಸ್ವಾವಲಂಬನೆ
- ಉಳಿತಾಯ ಸಂಗ್ರಹ
- ಸಾಲ ನೀಡಿಕೆ ಮತ್ತು ವಸೂಲಾತಿ
- ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಟ
- ಸ್ವಉದ್ಯೋಗಕ್ಕೆ ಪ್ರೋತ್ಸಾಹ

**8. ಗ್ರಾಮೀಣ ಆರ್ಥಿಕ ಪರಿಸ್ಥಿತಿ ಹೇಗಿದೆ?**

- ಕೃಷಿ ಮುಖ್ಯ ಉದ್ಯೋಗ
- ಬಡತನ ಹೆಚ್ಚಾಗಿದೆ
- ರಾಷ್ಟ್ರೀಯ ವರಮಾನ ಕ್ಕೆ ಕಡಿಮೆ ಕೊಡುಗೆ.
- ೬೦ ರಷ್ಟು ಜನರು ಪ್ರಾಥಮಿಕ ವಲಯದಲ್ಲಿ ದುಡಿಮೆ
- ಅತಿಯಾದ ನಿರುದ್ಯೋಗ
- ನಗರಗಳ ಕಡೆಗೆ ವಲಸೆ

## ಬ್ಯಾಂಕು ವ್ಯವಹಾರಗಳು

**1.ಬ್ಯಾಂಕಿನ ಲಕ್ಷಣಗಳು/ ಕಾರ್ಯಗಳು/ ಸೇವೆಗಳು/ ಬ್ಯಾಂಕ್ ಖಾತೆ ತೆಗೆಯುವುದರಿಂದ ಆಗುವ ಅನುಕೂಲಗಳನ್ನು ತಿಳಿಸಿ**

- ಹಣಕಾಸು ವಹಿವಾಟು
- ಠೇವಣಿಗಳ ಸಂಗ್ರಹ
- ಸಾಲಗಳನ್ನು ಕೊಡುವುದು
- ಹಣದ ಭದ್ರತೆ ಕಾಪಾಡುವುದು
- ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುವುದು
- ಸಾಲ ಪತ್ರ ಮತ್ತು ಜವಾಬ್ದಾರಿ ಪತ್ರಗಳ ನೀಡಿಕೆ
- ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡುಗಳ ನೀಡಿಕೆ

**2. ಅಂಚೆ ಕಚೇರಿಗಳು ಕೈಗೊಳ್ಳುವ ಹಣಕಾಸಿನ ಕಾರ್ಯಗಳಾವುವು?**

- ಅಂಚೆ ಉಳಿತಾಯಖಾತೆಗಳು
- ರಾಷ್ಟ್ರೀಯ ಉಳಿತಾಯ ಪತ್ರಗಳು
- ಕಿಸಾನ ವಿಕಾಸ ಪತ್ರಗಳು
- ಮಾಹೆಯಾನ ತೀರು ಠೇವಣಿಗಳು
- ಅಂಚೆ ವಿಮೆ
- ನಿವೃತ್ತಿ ವೇತನ
- ಹಣದ ವರ್ಗಾವಣೆ

**3. ಬ್ಯಾಂಕಿನಲ್ಲಿ ತೆರೆಯಬಹುದಾದ ವಿವಿಧ ಖಾತೆಗಳನ್ನು ಹೆಸರಿಸಿ**

- ಉಳಿತಾಯ ಖಾತೆ
- ಚಾಲ್ತಿ ಖಾತೆ
- ಆವರ್ತ ಠೇವಣಿ ಖಾತೆ
- ನಿಶ್ಚಿತ ಠೇವಣಿ ಖಾತೆ

**4. ಬ್ಯಾಂಕಿನಲ್ಲಿ ಖಾತೆಯನ್ನು ತೆರೆಯುವ ವಿಧಾನವನ್ನು ವಿವರಿಸಿ**

- ಬ್ಯಾಂಕ್ ಖಾತೆ ವಿಧವನ್ನು ನಿರ್ಧರಿಸುವುದು
- ಬ್ಯಾಂಕಿನ ಅಧಿಕಾರಿಯನ್ನು ಸಂಪರ್ಕಿಸುವುದು
- ಪ್ರಸ್ತಾವನೆ ಅರ್ಜಿ ತುಂಬುವುದು
- ಪರಿಚಿತರ ಉಲ್ಲೇಖ ಪಡೆಯುವುದು
- ಅಧಿಕಾರಿಯ ಒಪ್ಪಿಗೆ
- ಪ್ರಾರಂಭಿಕ ಠೇವಣಿ

**5. ಬ್ಯಾಂಕುಗಳ ವಿಧಗಳನ್ನು ಹೆಸರಿಸಿ**

- ಕೇಂದ್ರ ಬ್ಯಾಂಕು ಅಥವಾ ಆರ್ಬಿಐ
- ವಾಣಿಜ್ಯ ಬ್ಯಾಂಕುಗಳು
- ವ್ಯವಸಾಯ ಬ್ಯಾಂಕುಗಳು
- ಕೈಗಾರಿಕಾ ಬ್ಯಾಂಕುಗಳು
- ಸ್ಥಳೀಯ ಬ್ಯಾಂಕುಗಳು
- ಸಹಕಾರಿ ಬ್ಯಾಂಕುಗಳು

**6. ಉಳಿತಾಯ ಖಾತೆ ಮತ್ತು ಚಾಲ್ತಿ ಖಾತೆ ನಡುವಿನ ವ್ಯತ್ಯಾಸ ತಿಳಿಸಿ.**

**ಉಳಿತಾಯ ಖಾತೆ**

BASAVARAJ D. C. DHARWAD



Use E-Papers, Save Trees
Above line hide when print out

- ನಿಯಮಿತ ಆದಾಯ ಹೊಂದಿರುವವರು ಖಾತೆ
- ದಿನಕ್ಕೆ ಒಂದು ಬಾರಿ ಮಾತ್ರ ವ್ಯವಹಾರ
- ಉಳಿತಾಯ ಹಣಕ್ಕೆ ಬಡ್ಡಿ ನೀಡುತ್ತದೆ

ಚಾಲ್ತಿ ಖಾತೆ

- ವ್ಯಾಪಾರಸ್ಥರು ಔದ್ಯೋಗಿಕ ಸಂಸ್ಥೆಯವರ ಖಾತೆ
- ದಿನಕ್ಕೆ ಎಷ್ಟು ಬಾರಿ ಬೇಕಾದರೂ ವ್ಯವಹಾರ
- ಬ್ಯಾಂಕುಗಳು ಸೇವಾ ಶುಲ್ಕ ವಸೂಲಿ ಮಾಡುತ್ತವೆ

**7. ಆವರ್ತ ಠೇವಣಿ ಖಾತೆ ಮತ್ತು ನಿಶ್ಚಿತ ಠೇವಣಿ ಖಾತೆ ನಡುವಿನ ವ್ಯತ್ಯಾಸ ತಿಳಿಸಿ.**

**ಆವರ್ತ ಠೇವಣಿ ಖಾತೆ**

- ಭವಿಷ್ಯದಲ್ಲಿ ಹಣ ಹಿಂಪಡೆಯಲು ತೆಗೆದ ಖಾತೆ
- ಒಂದು ಅವಧಿಗೆ ತಿಂಗಳು-ತಿಂಗಳು ಠೇವಣಿ ಜಮಾ ಮಾಡುವುದು
- ಅವಧಿ ಮುಗಿದ ನಂತರ ಬಡ್ಡಿಯೊಂದಿಗೆ ವಾಪಸ್ ಪಡೆಯುವುದು
- ಮಕ್ಕಳ ವಿವಾಹ, ಚಿನ್ನ, ಭೂಮಿ, ಕಾರು ಖರೀದಿಗೆ ಅನುಕೂಲ

ನಿಶ್ಚಿತ ಠೇವಣಿ ಖಾತೆ

- ಠೇವಣಿಯನ್ನು ಒಂದು ನಿಶ್ಚಿತ ಅವಧಿಗೆ ಇಡುವುದು
- ನಿಶ್ಚಿತ ಅವಧಿ ಮುಗಿದ ನಂತರ ಹಣ ವಾಪಸ್
- ಠೇವಣಿ ಅವಧಿ ಮುಗಿಯುವ ಮುಂಚೆ ಹಣ ಪಡೆಯಲು ಸಾಧ್ಯವಿಲ್ಲ
- ಬಡ್ಡಿದರ ಅವಧಿಗನುಗುಣವಾಗಿ ಹೆಚ್ಚಾಗಿರುತ್ತದೆ

**8. ಬ್ಯಾಂಕಿನಲ್ಲಿ ಉಳಿತಾಯ ಖಾತೆ ತೆರೆಯುವವರ ಸಂಖ್ಯೆ ಹೇರಳವಾಗಿರುತ್ತದೆ ಕಾರಣವೇನು?**

- ಸುಲಭವಾಗಿ ತೆರೆಯಬಹುದಾದ ಖಾತೆ
- ಹಣ ಉಳಿತಾಯ ಮಾಡಲು ಸಹಾಯ ಮಾಡುತ್ತದೆ
- ಗರಿಷ್ಠ ಮೊತ್ತಕ್ಕೆ ಪರಿಮಿತಿ ಇರುವುದಿಲ್ಲ
- ಬ್ಯಾಂಕಿನಿಂದ ಹಣ ಪಡೆಯುವುದು ಸರಳ
- ಠೇವಣಿಗೆ ಬಡ್ಡಿ ಪಡೆಯಬಹುದು
- ವಿದ್ಯಾರ್ಥಿಗಳು, ಹಿರಿಯ, ನಾಗರಿಕರು, ನೌಕರರು, ಪಿಂಚಣಿದಾರರಿಗೆ ಅನುಕೂಲವಾಗಿದೆ

**9. ಬ್ಯಾಂಕರ್ ಹಾಗೂ ಗ್ರಾಹಕರಿಗೆ ಇರುವ ಸಂಬಂಧವನ್ನು ತಿಳಿಸಿ**

**ಸಾಮಾನ್ಯ ಸಂಬಂಧ**

- ಪ್ರಾಥಮಿಕ ಸಂಬಂಧ
- ಸಹಾಯಕ/ಉಪಕಾರಿ ಸಂಬಂಧ
- ಕಾರಬಾರಿ ಮತ್ತು ಮುಖ್ಯಸ್ಥನ ಸಂಬಂಧ

**ವಿಶೇಷ ಸಂಬಂಧ**

- ಚೆಕ್ಕುಗಳನ್ನು ಮನ್ನಣೆ ಮಾಡುವುದು
- ಗ್ರಾಹಕರ ಲೆಕ್ಕಗಳ ಗೌಪ್ಯತೆ ಕಾಪಾಡುವುದು

***FREE HIT QUESTIONS***

**1.ಕೃಷಿ/ ಕೈಗಾರಿಕೆ/ಸಾರಿಗೆ/ಸಂಪರ್ಕದ ಪ್ರಾಮುಖ್ಯತೆಯನ್ನು ತಿಳಿಸಿ.**

- ರಾಷ್ಟ್ರೀಯ ಆದಾಯದ ಹೆಚ್ಚಳ
- ತಲಾವರಮಾನ ಹೆಚ್ಚಳ
- ಜನರ ಜೀವನಮಟ್ಟ ಸುಧಾರಣೆ
- ಉದ್ಯೋಗಾವಕಾಶಗಳ ಹೆಚ್ಚಳ
- ಆರ್ಥಿಕ ಕ್ಷೇತ್ರದ ಪ್ರಗತಿ
- ವಿದೇಶಿ ವಿನಿಮಯ ಗಳಿಕೆ
- ಮಾರುಕಟ್ಟೆ ಅಭಿವೃದ್ಧಿ
- ಜಿಡಿಪಿ ಹೆಚ್ಚಳ

**2. ಬ್ರಹ್ಮ/ ಆರ್ಯ/ ಪ್ರಾರ್ಥನಾ/ ಸತ್ಯಶೋಧಕ ಸಮಾಜ /ರಾಮಕೃಷ್ಣ ಮಿಷನ್/ ಅಲಿಘರ್ ಚಳುವಳಿ/ಥಿಯೋಸಾಫಿಕಲ್ ಸೊಸೈಟಿ/ಯುವ ಬಂಗಾಳಿ/ಆತ್ಮ ಗೌರವ ಚಳುವಳಿಯ ಕೊಡುಗೆಗಳು ಅಥವಾ ಉದ್ದೇಶಗಳು ಅಥವಾ ಸುಧಾರಣೆಗಳನ್ನು ತಿಳಿಸಿ.**

***ರಾಜಾರಾಮ ಮೋಹನ್ ರಾಯ್/ದಯಾನಂದ ಸರಸ್ವತಿ/ ಆತ್ಮಾರಾಂ ಪಾಂಡುರಂಗ/ರಾನಡೆ/ಜ್ಯೋತಿಬಾ ಫುಲೆ/ಸ್ವಾಮಿ ವಿವೇಕಾನಂದ/ಸಯ್ಯದ್ ಅಹಮದಖಾನ್/ಅನಿಬೇಸೆಂಟ್/ ಪೆರಿಯಾರ್/ನಾರಾಯಣ ಗುರು ಅವರ ಸುಧಾರಣೆಗಳು ಅಥವಾ ಬೋಧನೆಗಳನ್ನು ತಿಳಿಸಿ.**

- ಬಾಲ್ಯ ವಿವಾಹಕ್ಕೆ ವಿರೋಧ
- ಸ್ತ್ರೀ ಶಿಕ್ಷಣಕ್ಕೆ ಪ್ರೋತ್ಸಾಹ
- ಜಾತಿಪದ್ಧತಿಗೆ ವಿರೋಧ
- ವಿಧವಾ ವಿವಾಹಕ್ಕೆ ಪ್ರೋತ್ಸಾಹ
- ಮೂರ್ತಿ ಪೂಜೆಗೆ ವಿರೋಧ
- ಅರ್ಥಹೀನ ಆಚರಣೆಗಳ ಖಂಡನೆ
- ಸ್ತ್ರೀ ಶೋಷಣೆ ಗೆ ವಿರೋಧ
- ಸಮಾನತೆಗೆ ಪ್ರಾಶಸ್ತ್ಯ

**3. ಕಬ್ಬಿಣ ಮತ್ತು ಉಕ್ಕಿನ/ ಕಾಗದ/ಅಲ್ಯೂಮಿನಿಯಂ/ಸಕ್ಕರೆ /ಹತ್ತಿ ಕೈಗಾರಿಕೆಗಳ ಸ್ಥಾನಿಕರಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?**

- ಕಚ್ಚಾವಸ್ತುಗಳ ಪೂರೈಕೆ
- ಸಾರಿಗೆ ಸಂಪರ್ಕ
- ಮಾರುಕಟ್ಟೆ ವ್ಯವಸ್ಥೆ
- ಕಾರ್ಮಿಕರ ಲಭ್ಯತೆ
- ಸೂಕ್ತ ವಾಯುಗುಣ
- ನೀರಿನ ಪೂರೈಕೆ
- ಬಂಡವಾಳ
- ವಿದ್ಯುಚ್ಛಕ್ತಿ ಪೂರೈಕೆ
- ಸರ್ಕಾರದ ನೀತಿ

**4. ಪ್ರವಾಹ /ಭೂಕಂಪ /ಭೂಕುಸಿತ /ಕಡಲ ಕೊರೆತ /ಚಂಡಮಾರುತಗಳಿಗೆ ಕಾರಣಗಳನ್ನು ತಿಳಿಸಿ.**

- ಗಣಿಗಾರಿಕೆ

BASAVARAJ D.C. DHARWAD



Use E-Papers, Save Trees
Above line hide when print out

- ನಗರೀಕರಣ
- ಸಾರಿಗೆ ನಿರ್ಮಾಣ
- ಅರಣ್ಯನಾಶ
- ನದಿ ಕಣಿವೆ ಯೋಜನೆಗಳು
- ನೈಸರ್ಗಿಕ ಅಸಮತೋಲನ
- ಮಾನವನ ಕೃತ್ಯಗಳು

**5.ಪ್ರವಾಹ /ಭೂಕಂಪ /ಭೂಕುಸಿತ /ಕಡಲ ಕೊರೆತ /ಚಂಡಮಾರುತಗಳಿಂದ ಉಂಟಾಗುವ ಪರಿಣಾಮಗಳನ್ನು ತಿಳಿಸಿ.**

- ಪ್ರಾಣ ಹಾನಿ
- ಆಸ್ತಿ ನಾಶ
- ಸಾರಿಗೆ ಸಂಪರ್ಕ ವ್ಯತ್ಯಯ
- ಮಣ್ಣಿನ ಸವೆತ
- ವಿದ್ಯುತ್ ಸರಬರಾಜಿಗೆ ತೊಂದರೆ
- ಸಾಂಕ್ರಾಮಿಕ ರೋಗಗಳ ಹರಡುವಿಕೆ
- ಮೂಲ ಸೌಲಭ್ಯಗಳಲ್ಲಿ ವ್ಯತ್ಯಯ

**6.ಪ್ರವಾಹ /ಭೂಕಂಪ /ಭೂಕುಸಿತ /ಕಡಲ ಕೊರೆತ /ಚಂಡಮಾರುತಗಳ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಪರಿಹಾರ ಕ್ರಮಗಳನ್ನುವಿವರಿಸಿ.**

- ಪರಿಸರ ಸಂರಕ್ಷಣೆ
- ಆಹಾರ ಪೂರೈಕೆ
- ತುರ್ತು ರಕ್ಷಣಾ ಕಾರ್ಯ
- ವೈದ್ಯಕೀಯ ಸೌಲಭ್ಯ
- ಪುನರ್ವಸತಿ ವ್ಯವಸ್ಥೆ
- ಸಾಂಕ್ರಮಿಕ ರೋಗಗಳ ನಿಯಂತ್ರಣ
- ಮೂಲಭೂತ ಸೌಲಭ್ಯಗಳ ಪೂರೈಕೆ

**7.ಪ್ರವಾಹ /ಭೂಕಂಪ /ಭೂಕುಸಿತ /ಕಡಲ ಕೊರೆತ /ಚಂಡಮಾರುತಗಳನಿಯಂತ್ರಣ ಕ್ರಮಗಳನ್ನುವಿವರಿಸಿ.**

- ಅರಣ್ಯ ಸಂರಕ್ಷಣೆ
- ಗಣಿಗಾರಿಕೆ ನಿಷೇಧ
- ಮಾಧ್ಯಮಗಳ ಮೂಲಕ ಜಾಗೃತಿ
- ನಗರೀಕರಣ ನಿಯಂತ್ರಣ
- ವೈಜ್ಞಾನಿಕ ಕೃಷಿ ಪದ್ಧತಿ
- ನೈಸರ್ಗಿಕ ಸಮತೋಲನ


**8.ಮಣ್ಣಿನ ಮಾದರಿ/ಭೂಳಕೆ ವಿಧ/ಬೆಳೆಯ ಮಾದರಿ/ಅರಣ್ಯ ಪ್ರಕಾರಗಳು/ಜನಸಂಖ್ಯೆ ಹಂಚಿಕೆ/ವಾಯುಗುಣ ನಿರ್ಧರಿಸುವ ಅಥವಾ ಪ್ರಭಾವ ಬೀರುವ ಅಂಶಗಳು ಯಾವುವು?**

- ಮೇಲ್ಮೈ ಲಕ್ಷಣ
- ಮಣ್ಣಿನ ಮಾದರಿ
- ಭೌಗೋಳಿಕ ಸ್ಥಾನ
- ವಾಯುಗುಣ
- ಸ್ವಾಭಾವಿಕ ಸಸ್ಯವರ್ಗ
- ಆರ್ಥಿಕ ಅಂಶಗಳು
- ಸಾಮಾಜಿಕ ಅಂಶಗಳು
- ಮಳೆಯ ಪ್ರಮಾಣ

BASAVARAJ D.C. DHARWAD


Use E-Papers, Save Trees
Above line hide when print out


# ಭಾರತದ ನಕ್ಷೆ-1





Use E-Papers, Save Trees
Above line hide when print out

# ಭಾರತದ ನಕ್ಷೆ 2





Use E-Papers, Save Trees
Above line hide when print out